ಶ್ರೀ ಎಚ್. ಸಿದ್ದವೀರಪ್ಪ.—ಈಗ stock position is fairly satisfactory ಎಂದು ನಿನ್ನೆ ಹೇಳಿದೆ.

ಶ್ರೀ ಬಿ. ಸಿ. ನಂಜುಂಡಯ್ಯ.—ದಾಸ್ತಾನಿನ ಸ್ಥಿತಿ ಸಾಕಷ್ಟಿದಷ್ಟು ಸಮಾಧಾನಕರವಾಗಿದೆಯೆಂದು ಹೇಳುವಾಗ, ಡಿಪೋಗಳಲ್ಲಿ ಜನರಿಗೆ ಸರಿಯಾಗಿ ಆಹಾರ ಧಾನ್ಯ ವಿನಿಯೋಗವಾಗುತ್ತಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೆ?

Sri H. SIDDAVEERAPPA.—Sometimes due to transport bottleneck difficulties arise. It is very difficult to make all satisfactory arrangements. Whenever any complaint is received, I assure the House that it is promptly attended to.

ಶ್ರೀ ಬಿ. ಸಿ. ನಂಜುಂಡಯ್ಯ.—ಕೆಲವು ಸಂದರ್ಭಗಳಲ್ಲಿ ತೊಂದರೆಯಾಗುತ್ತದೆಂದು ಹೇಳಿದಿರಿ. ತುಮಕೂರು ಡಿಸ್ಟ್ರಿಕ್ಟಿನ ವಿಚಾರ ಹೇಳುವುದಾದರೆ, ಅನೇಕ ಸಂದರ್ಭಗಳಲ್ಲಿ ಧಾನ್ಯಗಳು ಜನರಿಗೆ ಹಂಚಿಕೆಯಾಗುತ್ತಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಎಚ್. ಸಿದ್ದವೀರಪ್ಪ.—ದೂರು ಬಂದಾಗಲೆಲ್ಲಾ ಸರಿಪಡಿಸುವುದಕ್ಕೆ ಪ್ರಯತ್ನಪಟ್ಟಿದ್ದೇನೆ, ಇನ್ನುಮೇಲೂ ಪಡುತ್ತೇನೆ.

ಶ್ರೀ ಬಿ. ಸಿ. ನಂಜುಂಡಯ್ಯ.—2(1)ನೆಯ ಪ್ರಶ್ನೆಯ (ಬಿ) ಭಾಗಕ್ಕೆ ಕೊಟ್ಟಿರುವ ಉತ್ತರದಲ್ಲಿ ಅಗಸ್ಟ್ ತಿಂಗಳಿನಲ್ಲಿ ಏಳು ಸಾವಿರ ಟನ್ ಗೋಧಿ ಖರ್ಚಾಗಿದೆ ಎಂದು ತಿಳಿಸಿದೆ. ಆಗ free sale ಇತ್ತಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಬಿ. ಸಿ. ನಂಜುಂಡಯ್ಯ.—ಆಗ ಅನೇಕರು ಹೊರಕ್ಕೆ ಕಳುಹಿಸಿದ್ದಾರೆಂಬುದು ಗಮನಕ್ಕೆ ಬಂದಿದೆಯೆ?

ಶ್ರೀ ಎಚ್. ಸಿದ್ದವೀರಪ್ಪ.—ಅಲ್ಲಲ್ಲಿ ಆರೀತಿ ಮಾಡಿದ್ದಾರೆಂಬುದು ಗಮನಕ್ಕೆ ಬಂದಿದೆ.

ಶ್ರೀ ಬಿ. ಸಿ. ನಂಜುಂಡಯ್ಯ.—ದಾವಣಗೆರೆಯಿಂದ ರೈಲ್ವೆ ವ್ಯಾಗನ್‌ಗಳಲ್ಲಿ ಕೂಡ ಹೊರಕ್ಕೆ ಹೋಯಿತೆಂಬುದು ಗಮನಕ್ಕೆ ಬಂದಿದೆಯೆ?

ಶ್ರೀ ಎಚ್. ಸಿದ್ದವೀರಪ್ಪ.—ಕೆಲವರು ಆ ಅವಕಾಶವನ್ನು ದುರುಪಯೋಗಪಡಿಸಿದರೆಂದು ವರದಿ ಬಂದಿದೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಅಂಥವರ ಪಟ್ಟಿಯನ್ನು ತಯಾರಿಸಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಕೆಲವು ಪರದಿಗಳನ್ನು ತರಿಸುತ್ತಿದ್ದೇವೆ.

ಶ್ರೀ ಬಿ. ಸಿ. ನಂಜುಂಡಯ್ಯ.—ತಾವು ಅನೇಕ ಸಂದರ್ಭಗಳಲ್ಲಿ lorry traffic prohibit ಮಾಡಿದ್ದಾರೆಂದು ಹೇಳಿದಿರಿ; ಹೀಗಿದ್ದರೂ ಈಗಲೂ ಈರೀತಿ ಸಾಗಾಣಿಕೆ ನಡೆಯುತ್ತಿದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೆ?

Sri H. SIDDAVEERAPPA.—I have given a very large measure of discretion to the District Magistrate. Each case will be decided on its own merits.

Mr. SPEAKER.—You have a debate on the food situation. You can speak then, so far as this question is concerned.

(One Hon'ble Member got up to put supplementaries.)

Mr. SPEAKER.—If I give an opportunity to you I will have to give opportunity to others. Sri H. K. Siddaiya,

---

Transfer of Constables from one district to another.

Q.—409. Sri H. K. SIDDAIYA (Belur—Scheduled Castes).—

Will the Government be pleased to state :—

(*a*) whether Police Constables are being transferred from district to district in the State ;

(*b*) whether any difficulties experienced by the Constables as a result of this has come to their notice ;

(*c*) whether arrangements will be made to transfer those persons to their respective districts in order to mitigate their hardships ?

A.—Sri H. SIDDAVEERAPPA (Minister for Home Affairs and Agriculture).—

(*a*) Police Constables are not ordinarily transferred from district to district, but only in exceptional circumstances such transfers are ordered in the following circumstances :—

(i) when Police Constables of different districts apply for mutual transfers ;

(ii) when the strength of the force in a district is reduced, Police Constables in excess of the allocation are transferred against vacancies in other districts ;

(iii) Police Constables in places like Bangalore and Railways, etc., are apt to become localised and indifferent towards work. Such of them are transferred out in the interest of public service as their transfer within the same area (*e.g.*, Bangalore) will not have any effect.

(*b*) No.

(*c*) As Police Constables are transferred out in the interest of public service and after due consideration, it is not advisable to retransfer them back to their original places.

ಶ್ರೀ ಎಚ್. ಕೆ. ಸಿದ್ದಯ್ಯ.—ಪೋಲೀಸ್ ಕಾನ್ಸ್ಟೇಬಲುಗಳನ್ನು ಡಿಸ್ಟ್ರಿಕ್ಟಿನಿಂದ ಡಿಸ್ಟ್ರಿಕ್ಟಿಗೆ ವರ್ಗ ಮಾಡುತ್ತೀರಾ ಎಂದು ಕೇಳಿದ್ದೇನೆ; ಅದಕ್ಕೆ ಉತ್ತರ ಹೇಳಿದ್ದೀರಾ?

ಅಧ್ಯಕ್ಷರು.—ತಾವೇ ಉತ್ತರದಲ್ಲಿರುವುದನ್ನು ಓದಿ ಕೊಳ್ಳಬಹುದು.

ಶ್ರೀ ಎಚ್. ಕೆ. ಸಿದ್ದಯ್ಯ.—ಸಂಸ್ಥಾನದಲ್ಲಿ ಪೋಲೀಸ್ ಕಾರ್ಯಸ್ಥೀಬಲುಗಳನ್ನು ಡಿಸ್ಟ್ರಿಕ್ಟಿನಿಂದ ಡಿಸ್ಟ್ರಿಕ್ಟಿಗೆ ವರ್ಗ ಮಾಡುತ್ತೀರಾ?

ಅಧ್ಯಕ್ಷರು.—ಅದಕ್ಕೆ ಉತ್ತರ ಕೊಟ್ಟಿದ್ದಾರೆ; ಬೇರೆ ಪ್ರಶ್ನೆಯಿದ್ದರೆ ಕೇಳಿ.

ಶ್ರೀ ಎಚ್. ಕೆ. ಸಿದ್ದಯ್ಯ.—ಕೋರಾರದಿಂದ ಹಾಸನಕ್ಕೆ ಅವರನ್ನು ವರ್ಗ ಮಾಡಿದರೆ ಅವರಿಗೆ ತೊಂದರೆಯಾಗುವುದಿಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪ.—ವಿಶೇಷ ಸಂದರ್ಭ ಗಳಲ್ಲಿ ಮಾಡಿರುತ್ತೇವೆಯೇ ಹೊರತು ಸರ್ವೇ ಸಾಮಾನ್ಯವಾಗಿ, ಅವರನ್ನು ಒಂದು ಡಿಸ್ಟ್ರಿಕ್ಟಿನಿಂದ ಇನ್ನೊಂದು ಡಿಸ್ಟ್ರಿಕ್ಟಿಗೆ ವರ್ಗ ಮಾಡುವುದಿಲ್ಲ.

ಶ್ರೀ ಎಚ್. ಕೆ. ಸಿದ್ದಯ್ಯ.—ವಿಶೇಷ ಸಂದರ್ಭ ವೆಂದರೇನು?

ಶ್ರೀ ಎಚ್. ಸಿದ್ದವೀರಪ್ಪ.—ಆ ಮನುಷ್ಯ ಒಂದೇ ಜಿಲ್ಲೆಯಲ್ಲಿದ್ದರೆ ತೊಂದರೆ ಬರುತ್ತದೆ ಎಂದು ಕಂಡು ಬಂದಾಗ, ಅಥವಾ ಶಿಕ್ಷೆ ಮಾಡಬೇಕಾದರೆ ಹೀಗೆ ವರ್ಗ ಮಾಡಬೇಕಾಗುತ್ತದೆ.

ಶ್ರೀ ಎಚ್. ಕೆ. ಸಿದ್ದಯ್ಯ.—ಇಂಥಾ ತೊಂದರೆ ಗಳನ್ನು ಪೋಲೀಸ್ ಕಾರ್ಯಸ್ಥೀಬಲುಗಳು ಮಾತ್ರ ಹೂಡುತ್ತಾರೆಯೆ?

ಶ್ರೀ ಎಚ್. ಸಿದ್ದವೀರಪ್ಪ.—ಯಾರು ತಪ್ಪು ಮಾಡಿ ದರೂ ಅವರನ್ನು ಇದೇ ರೀತಿ ಮಾಡುತ್ತೇವೆ.

ಶ್ರೀ ಎಚ್. ಕೆ. ಸಿದ್ದಯ್ಯ.—ಅವರು ಬಹಳ ಕಡಮೆ ದರ್ಜೆಯ ಸಂಬಳದವರು; ಅವರನ್ನು ಕೋರಾರದಿಂದ, ಹಾಸನದಿಂದ ಮಂಡ್ಯಕ್ಕೆ ವರ್ಗ ಮಾಡಿದರೆ, ಅವರ ಸಂಸಾರದ ಗತಿ ಏನೆಂಬುದನ್ನು ತಾವು ಯೋಚನೆ ಮಾಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದಿದ್ದಾರೆ; ಆರೀತಿಯಾದರೆ ಯೋಚನೆ ಮಾಡುತ್ತೇವೆ.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಅವರಿಂದ ತೊಂದ ರೆಯಾದರೂ ಅವರನ್ನು ಅದೇ ಡಿಸ್ಟ್ರಿಕ್ಟಿನಲ್ಲೇ ಎಷ್ಟು ದಿವಸವಾದರೂ ಇಟ್ಟುಕೊಳ್ಳುತ್ತೀರಾ?

ಅಧ್ಯಕ್ಷರು.—ಅದಕ್ಕೆ ಆಗಲೇ ಉತ್ತರ ಹೇಳಿದ್ದಾರೆ.

Next Question No. 99 Sri L. Siddappa.

Sri L. SIDDAPPA.—This may kindly be taken up some time later; I will go through the memorandum placed on the table.

Mr. SPEAKER.—Yes, if there is time.

Invitees to Raj Sabha in September 1952.

Q.—197. **Sri B. C. NANJUNDAIYA** (Kora).—

Will the Government be pleased to state:—

the names of invitees to the Raj Sabha in September 1952, entitled to Travelling Allowance and Daily Allowance from Government?

A—**Sri K. HANUMANTHAIYA** (Chief Minister).—

None of the invitees as such are entitled to Travelling Allowance or Daily Allowance.

ಶ್ರೀ ಬಿ. ಸಿ. ನಂಜುಂಡಯ್ಯ.—ಮಹಾರಾಜರು ರಾಜಸಭೆಗೆ ಆಹ್ವಾನ ಕೊಡುವುದಕ್ಕೂ ಸರ್ಕಾರಕ್ಕೂ ಸಂಬಂಧವಿದೆಯೆ?

ಶ್ರೀ ಕೆ. ಹನುಮಂತಯ್ಯ.—ಇದೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಹಿಂದೆ ಎಷ್ಟು ಜನ ರಿಗೆ ಆಹ್ವಾನ ಕಳುಹಿಸುತ್ತಿದ್ದರು, ಈಗ ಎಷ್ಟು ಜನರಿಗೆ ಕಳುಹಿಸಿದ್ದಾರೆ?

ಶ್ರೀ ಕೆ. ಹನುಮಂತಯ್ಯ.—ಹಿಂದಿನ ಪದ್ಧತಿಯನ್ನು ಅನುಸರಿಸಿಕೊಂಡು ಬರರಾಗಿದೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಹಿಂದೆ ಆಹ್ವಾನಿತ ರಿಗೆ ಟಿ. ಎ. ಮತ್ತು ಡಿ. ಎ. ಕೊಡುತ್ತಿದ್ದರೆ?

ಶ್ರೀ ಕೆ. ಹನುಮಂತಯ್ಯ.—ಕೆಲವರಿಗೆ ಕೊಡು ತ್ತಿದ್ದರು.

ಶ್ರೀ ಬಿ. ಸಿ. ನಂಜುಂಡಯ್ಯ.—ಎಲ್ಲರಿಗೂ ಕೊಡು ತ್ತಿದ್ದರೆಂದು ಹೇಳಿದರೆ ಒಪ್ಪುತ್ತೀರಾ?

ಶ್ರೀ ಕೆ. ಹನುಮಂತಯ್ಯ.—ಎಲ್ಲರಿಗೂ ಎಂದರೆ ನಾನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಅನೇಕರಿಗೆ ಕೊಡುತ್ತಿದ್ದರೆಂದು ಕೇಳಬಹುದು.

ಶ್ರೀ ಬಿ. ಸಿ. ನಂಜುಂಡಯ್ಯ.—ಹಿಂದೆ ಆಹ್ವಾನಿ ತರು ಕೇವಲ ಕೆಲವೇ ಜನರಿರುತ್ತಿದ್ದರೆ?

ಶ್ರೀ ಕೆ. ಹನುಮಂತಯ್ಯ.—ನಾನು ಮೊದಲೇ ಹೇಳಿದಂತೆ ಹಿಂದಿನ ಪದ್ಧತಿಯನ್ನು ಬದರಾವಣೆ ಮಾಡಿಲ್ಲ.

ಶ್ರೀ ಬಿ. ಸಿ. ನಂಜುಂಡಯ್ಯ.—ಆಗ ಎಲ್ಲರಿಗೂ ಕೊಡುತ್ತಿದ್ದರೆಂಬುದು ತಮ್ಮ ಗಮನಕ್ಕೆ ಬಂದಿದೆಯೆ?

Mr. SPEAKER.—That is answered. It is stated that some of them used to be paid.

ಶ್ರೀ ಕೆ. ಹನುಮಂತಯ್ಯ.—ಟಿ. ಎ. ಮತ್ತು ಡಿ. ಎ. ಕೊಡಬೇಕಾಗಿತ್ತೆಂಬ ಅಭಿಪ್ರಾಯ ಅವರಿಗಿರುವುದಾ ದರೆ, ಉದ್ದೇಶ ಪೂರ್ವಕವಾಗಿಯೇ ಕೊಡಲಲ್ಲವೆಂದು ಹೇಳುತ್ತೇನೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಆಹ್ವಾನಿಸಲ್ಪಟ್ಟ ಯಾರಿಗೂ ಭತ್ಯವನ್ನು ಕೊಡಲಲ್ಲ. ಮಂತ್ರಿಗಳು ತೆಗೆದುಕೊಂಡರೆ?

ಶ್ರೀ ಕೆ. ಹನುಮಂತಯ್ಯ.—ತೆಗೆದುಕೊಂಡರು. ಸಾಮಾನ್ಯವಾಗಿ ಮೈಸೂರಿಗೆ ಹೋದಾಗ ರೂಲ್ಸ್ ಪ್ರಕಾರ ಏನು ತೆಗೆದುಕೊಳ್ಳಬೇಕೋ ಅದನ್ನೇ ಮಂತ್ರಿ ಗಳೂ ಇತರ ಕೆಲವು ಅಧಿಕಾರಿಗಳೂ ತೆಗೆದುಕೊಂಡಿ ದ್ದಾರೆ. ಅಲ್ಲಿ ಕಾರ್ಯಭರವನ್ನು ಏರ್ಪಾಡು ಮಾಡಿದ್ದರು. ಆ ಕೆಲಸಕ್ಕೆಂಬುದಕ್ಕಾಗಿ ಟಿ. ಎ., ಡಿ.ಎ. ತೆಗೆದುಕೊಂಡಿ ದ್ದಾರೆ; ರಾಜಸಭೆಗೆ ಆಹ್ವಾನಿತರಾಗಿದ್ದಕ್ಕಾಗಿ ಯಾರಿಗೂ ಕೊಡಲಲ್ಲ

ಶ್ರೀ ಜೆ. ಮಹಮದ್ ಇಮಾಂ (ಜಗಳೂರು).—ಮಂತ್ರಿಗಳು ದಸರಾದಲ್ಲಿ ಹತ್ತು ದಿವಸವೂ ಡಿ. ಎ. ತೆಗೆದುಕೊಂಡಿದ್ದಾರೋ ಅಥವಾ ಸರ್ಕಾರಿ ಕೆಲಸ ಮಾಡಿದ ದಿವಸಗಳು ಮಾತ್ರ ತೆಗೆದುಕೊಂಡಿದ್ದಾರೊ?

ಶ್ರೀ ಕೆ. ಹನುಮಂತಯ್ಯ.—ಸ್ವಾಮಿ, ಹಿಂದೆ ಅವರು (ಶ್ರೀ ಇಮಾಂರವರು) ಯಾವ ರೀತಿ ತೆಗೆದುಕೊಂಡರೋ ಅದೇ ರೀತಿ ನಾವೂ ತೆಗೆದುಕೊಂಡೆವು.

ಶ್ರೀ ಜೆ. ಮಹಮದ್ ಇಮಾಂ.—ಹಿಂದೆ ನಾವು ದಸರಾಕ್ಕೆ ಹೋಗುತ್ತಿದ್ದಾಗ ತೆಗೆದುಕೊಳ್ಳುತ್ತಿದ್ದೆವು,